Road from Shanthi Sagar Tank

*Q.—380. Sri N. G. HALAPPA (Channagiri).—

Will the Minister for Public Works be pleased to state :—

(*a*) whether Government are aware that the road from "Shanthi Sagar" tank to Sasalu, Dummi Thyavanige road, Channagiri to Shivane road, road from Channagiri to Nallur *via* Channessahura village in Channagiri taluk are not at all roadworthy ;

(*b*) whether the Government would take immediate steps to make them roadworthy ?

A.—Sri ALUR HANUMANTHAPPA (Deputy Minister for Minor Irrigation) [On behalf of SRI VEERENDRA PATIL (Minister for Public Works)].—

(*a*) All these roads are roadworthy except road from Channagiri to Nallur, *via* Channessapura village.

(*b*) Depends upon the availability of funds.

1-30 P.M.

ಶ್ರೀ ಎನ್. ಜಿ. ಹಾಲಪ್ಪ.—ಶಾಂತಿಸಾಗರದಿಂದ ಸಾಸಲು, ದುಮ್ಮಿ, ತ್ಯಾವಣಿಗೆ ರಸ್ತೆ, ಚನ್ನಗಿರಿ-ಶಿವಣಿ ರಸ್ತೆ ಇವೆಲ್ಲಾ ಪ್ರಯಾಣಕ್ಕೆ ಯೋಗ್ಯವಾಗಿವೆ ಎಂದು ಹೇಳಿದ್ದಾರೆ. ಈ ರಸ್ತೆಗಳು ಧನ ತಿರುಗುವುದಕ್ಕೂ ಯೋಗ್ಯವಾಗಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—ಶಾಂತಿಸಾಗರ-ಸಾಸಲು ರಸ್ತೆ 18 ಮೈಲಿ ಇದೆ. ಅದರಲ್ಲಿ 13 ಮೈಲಿ 3 ಫರ್ಲಾಂಗ್ ಶಿವಮೊಗ್ಗ ಡಿವಿಜನ್‌ನಲ್ಲಿ ಬರುತ್ತದೆ. 90 ಸಾವಿರ ರೂಪಾಯಿ ಗಳಿಗೆ ಅಂದಾಜು ತಯಾರಾಗಿ ಕೆಲಸ ನಡೆಯುತ್ತಿದೆ.

ಶ್ರೀ ಎನ್. ಜಿ. ಹಾಲಪ್ಪ.—ಈ ಕೆಲಸ ಯಾವಾಗ ಪೂರ್ತಿಯಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಆಲೂರು ಹನುಮಂತಪ್ಪ.—ಈಗ ಕೆಲಸ ಮಾಡುತ್ತಿದ್ದಾರೆ.

Sri G. DUGGAPPA.—These roads are not at all roadworthy. What exactly is the condition of these roads ? Have you got any report from your officers ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಕೇಳಿರುವ ರಸ್ತೆಗಳ ವಿವರಗಳು ಬೇಕು ಎಂದರೆ ಓದುತ್ತೇನೆ. 90 ಸಾವಿರಕ್ಕೆ ಶಾಂತಿಸಾಗರದಿಂದ ಸಾಸಲು ರಸ್ತೆಗೆ ಅಂದಾಜು ತಯಾರಾಗಿ ಕೆಲಸ ನಡೆಯುತ್ತಿದೆ. ಆರು ಸಾವಿರ ರೂಪಾಯಿ ಅಂದಾಜಿನ ಕೆಲಸಕಾರ್ಯಗಳು ಇದೇ ರಸ್ತೆ ಮೇಲೆ ನಾಲ್ಕು ಮೈಲಿ ದಾವಣಗೆರೆ ಡಿವಿಜನ್‌ನಲ್ಲಿ ನಡೆಯುತ್ತಿವೆ. ತ್ಯಾವಣಿಗೆ-ದುಮ್ಮಿ ರಸ್ತೆ ಸರಿಯಾದ ಸ್ಥಿತಿಯಲ್ಲಿದೆ ಎಂದು ವರದಿ ಬಂದಿದೆ. ಚನ್ನಗಿರಿ-ಶಿವಣಿ ರಸ್ತೆಗೆ ಎಷ್ಟು ರಿಪೇರಿ ಕಾಮಗಾರಿಗಳು ಆಗಬೇಕಾಗಿತ್ತೋ ಅದನ್ನು ಮಾಡಿದ್ದಾರೆ.

Sri MANIK RAO SHAM RAO.—Is it a fact that many road development works in the State have been held up for want of road rollers ?

Sri ALUR HANUMANTHAPPA.—It is not so.

ಶ್ರೀ ಜಿ. ದುಗ್ಗಪ್ಪ.—ಈ ರಸ್ತೆಯಲ್ಲಿ ಹಿಂದೆ ಹೆಚ್ಚು ಮಳೆಯಿಂದ ಕೊಚ್ಚಿ ಹೋಗಿರುವ ಎಷ್ಟು ಸೇತುವೆಗಳು ಇನ್ನೂ ರಿಪೇರಿ ಮಾಡತಕ್ಕ ಅವಸ್ಥೆಯಲ್ಲಿವೆ ?

ಶ್ರೀ ಆಲೂರು ಹನುಮಂತಪ್ಪ.—ನಾಲಾಬಾದು ಕೆಲಸದಲ್ಲಿ ಪ್ರವಾಹದಿಂದ ಕೊಚ್ಚಿ ಹೋಗಿರತಕ್ಕ ಕೆಲವು ಕಲ್‌ವರ್ಟ್ ಇತ್ಯಾದಿಗಳನ್ನು ಮಾಡುತ್ತಾರೆ.

ಶ್ರೀ ಎಂ. ಮಲ್ಲಪ್ಪ.—ಕಳೆದ ಮೂರು ವರ್ಷಗಳಲ್ಲಿ ಚನ್ನಗಿರಿ-ಶಿವನೆ ರಸ್ತೆಗೆ ಏನಾದರೂ ರಿಪೇರಿ ಆಗಿದೆಯೇ? ಆಗಿದ್ದರೆ ಯಾವ ವರ್ಷವಾಗಿದೆ ಮತ್ತು ಎಷ್ಟು ರೂಪಾಯಿ ಖರ್ಚು ಮಾಡಲಾಗಿದೆ?

ಶ್ರೀ ಆಲೂರು ಹನುಮಂತಪ್ಪ.—ವಿವರಗಳು ನನ್ನ ಹತ್ತಿರ ಇಲ್ಲ. ಇನ್ನೊಂದು ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಈ ರಸ್ತೆಗಳು ಪ್ರಯಾಣಕ್ಕೆ ಯೋಗ್ಯವಾಗಿವೆ ಎಂದು ಸರ್ಕಾರಕ್ಕೆ ವರದಿ ಮಾಡಿದ್ದಾರೆಂದು ಹೇಳಿದ್ದಾರೆ. ಈ ರಸ್ತೆಗಳಿಗೆ ಜಲ್ಲಿ ಕಲ್ಲು ಯಾವಾಗ ಹಾಕಿದರು, ರಿಪೇರಿ ಮಾಡಿ ಎಷ್ಟು ಕಾಲವಾಯಿತು ಎನ್ನುವ ವರದಿಯನ್ನೇನಾದರೂ ಕೊಟ್ಟಿದ್ದಾರೆಯೇ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ಶಾಂತಿಸಾಗರದಿಂದ ಸಾನಲು ರಸ್ತೆ ಕೆಲಸವನ್ನು 90 ಸಾವಿರ ರೂಪಾಯಿ ಅಂದಾಜಿನಲ್ಲಿ ಶಿವಮೊಗ್ಗ ಡಿವಿಜನ್‌ನಲ್ಲಿ ತೆಗೆದುಕೊಂಡಿದ್ದಾರೆ. ದಾವಣಗೆರೆ ಡಿವಿಜನ್‌ನಲ್ಲಿ ಆರು ಸಾವಿರ ರೂಪಾಯಿ ಕೆಲಸಕಾರ್ಯಗಳು ನಡೆಯುತ್ತಿವೆ. ಮಾನ್ಯ ಸದಸ್ಯರು ಕೇಳಿರತಕ್ಕ ರಸ್ತೆಯ ಪರಿಸ್ಥಿತಿ ಅಷ್ಟು ಕೆಟ್ಟಿಲ್ಲ. ಆದರೂ ಸಹ ಮೇಂಟೆನೆನ್ಸ್ ಎಲ್ಲೆಲ್ಲಿ ಸಾಧ್ಯ ಏದೆಯೋ ಅಲ್ಲಿ ಮಾಡುತ್ತಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ದುಮ್ಮಿಯಿಂದ ಚನ್ನಗಿರಿಗೆ ಹೋಗುವ ರಸ್ತೆಯನ್ನು ಕಣ್ಣಿನಿಂದ ನೋಡುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ಸ್ಪೆಷಲ್ ಗ್ರಾಂಟ್ ಕೊಟ್ಟು ಇದನ್ನು ರಿಪೇರಿ ಮಾಡಿಸುತ್ತೀರಾ, ಸ್ವಾಮಿ?

Sri ALUR HANUMANTHAPPA.—We will examine the suggestion of the hon'ble member.

ಶ್ರೀ ಕೆ. ಎಚ್. ಪಾಟೀಲ್.—ಅನೇಕ ಕಡೆಗಳಲ್ಲಿ ಮೆಟೀರಿಯಲ್ ಕಲೆಕ್ಟ್ ಮಾಡಿದ್ದು ವ್ಯರ್ಥ ಆಗಲಕ್ಕೆ ಹತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲಿ ಆ ರೀತಿ ಆಗಿದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ನಾವು ಪರಿಶೀಲನೆ ಮಾಡಬಹುದು.

ಶ್ರೀ ಸದಾಶಿವಪ್ಪ ಪಾಟೀಲ್.—ತುರ್ತು ಪರಿಸ್ಥಿತಿಯಲ್ಲಿ ಹೊಸ ರಸ್ತೆಗಳನ್ನು ತೆಗೆದುಕೊಳ್ಳಬಾರದು ಎಂದು ಆಜ್ಞೆಯಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳಿದ್ದಾರೆ, ಇದು ನಿಜವೇ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—ರಸ್ತೆಗಳಿಗಿಂತ ನೀರಾವರಿಗೆ ಹೆಚ್ಚು ಆದ್ಯತೆ ಕೊಡಬೇಕು ಎಂದು ಇದೆ. ಮಾನ್ಯ ಸದಸ್ಯರ ಸಲಹೆ ಮೇರೆ ಮತ್ತು ದೇಶದ ಸಾರಿಗೆ ಸಂಚಾರದ ಅವಶ್ಯಕತೆ ಮೇರೆ ಇತ್ತೀಚೆಗೆ ರಸ್ತೆಗಳನ್ನು ಕೂಡ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಜರೂರಾತಿ ಪರಿಸ್ಥಿತಿಯಿರುವಾಗ ಹೊಸ ರಸ್ತೆ ತೆಗೆದುಕೊಳ್ಳಬಾರದೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆ ರೀತಿ ಆಜ್ಞೆ ಆಗಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅಧಿಕಾರಿಗಳ ಸಲಹೆಯ ಮೇಲೆ ತೆಗೆದುಕೊಳ್ಳುವುದು ಬಿಡುವುದಲ್ಲ, ಅವಶ್ಯಕತೆಯಮೇರೆ ನಿರ್ಣಯವಾಗಬೇಕು.

Sri A. R. BADRI NARAYAN.—What is the object or idea of taking over these district-fund roads to the State fund?

ಶ್ರೀ ಆಲೂರು ಹನುಮಂತಪ್ಪ.—ಆ ರಸ್ತೆಯ ಪ್ರಾಮುಖ್ಯತೆ ಜನರ ಸಂಚಾರ ದೃಷ್ಟಿಯಿಂದ ಮತ್ತು ಇತರ ದೃಷ್ಟಿಯಿಂದ ಎಷ್ಟಿದೆ ಎಂದು ನೋಡಿ ತೆಗೆದುಕೊಳ್ಳಬೇಕಾಗುತ್ತದೆ.

Sri A. R. BADRINARAYAN.—Is the Government aware that for many years many of these roads have not been taken up for repairs?

Sri ALUR HANUMANTHAPPA.—I cannot admit it. We have got statistics on hand; I can furnish the details if the hon'ble member wants.

ಶ್ರೀ ಎನ್. ಜಿ. ಹಾಲಪ್ಪ.—ಚನ್ನಗಿರಿ—ಚನ್ನೇಶಪುರ ರಸ್ತೆಗೆ ಭದ್ರಾ ಪ್ರಾಜೆಕ್ಟ್ ಥಾನಲ್ ಡಿವಿಜನ್‌ನವರು ಹಣ ಕೊಡುತ್ತೇವೆಂದರೂ ಏಕೆ ಕೆಲಸಮಾಡಿಲ್ಲ?

ಶ್ರೀ ಆಲೂರು ಹನುಮಂತಪ್ಪ.—ಹಣ ಬಂದಮೇಲೆ ಇರಿಗೇಷನ್ ಟ್ಯಾಕ್ಸ್ ರಸ್ತೆ ತೆಗೆದು ಕೊಳ್ಳಬೇಕು.

ಶ್ರೀ ಜಿ. ದುಗ್ಗಪ್ಪ.—ಶಿವಮೊಗ್ಗ-ಚನ್ನಗಿರಿ ರಸ್ತೆ ಕೆಟ್ಟಿರುವುದರಿಂದ ಅದಕ್ಕೆ ಸ್ಪೆಷರ್ ಗ್ರಾಂಟನ್ನು ಕೊಟ್ಟು ಮಾಡಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ವಿಚಾರಮಾಡುತ್ತೇವೆ.

Drinking Water Wells in Kolar

*Q.—175. Sri A. MUNIAPPA (Bagepalli).—

Will the Minister for Development and Co-operation be pleased to state :—

(*a*) the names of villages which are not provided with drinking water wells in Kolar District (Talukwise information may be given) ;

(*b*) the action taken by them in this behalf ?

A.—Sri P. M. NAD GOUDA (Minister for Development and Co-operation).—

(*a*) *Vide* list placed on the Table of the House.**

(*b*) In 66 villages well works are taken up and are under execution. Action to provide drinking water wells to the remaining villages is being taken up in a phased programme.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಲ್ಲಿ ಬಾವಿಗಳನ್ನೊದಗಿಸದಿರುವ ಎಲ್ಲಾ ತಾಲುಕುಗಳ ಹೆಸರನ್ನು ಕೇಳಿದ್ದರೂ ಕೂಡ ಗೌರಿಬಿದನೂರು ತಾಲ್ಲೂಕಿನ ಹೆಸರನ್ನು ಪಟ್ಟಿಯಲ್ಲಿ ಸೇರಿಸದಿರಲು ಕಾರಣವೇನು ?

†ಶ್ರೀ ಪಿ. ಎಂ. ನಾಡಗೌಡ.—ಅಲ್ಲಿ ಬಾವಿ ಇರುವುದರಿಂದ ಅದನ್ನು ಕೊಟ್ಟಿಲ್ಲ.

ಶ್ರೀ ಎ. ಮುನಿಯಪ್ಪ.—ಗೌರಿಬಿದನೂರು ತಾಲ್ಲೂಕು ಕೋಲಾರ ಜಿಲ್ಲೆಗೆ ಸೇರಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಸೇರಿದೆ. ತಪ್ಪು ಪ್ರಶ್ನೆಯಲ್ಲಿ ಕೇಳಿರುವುದನ್ನು ಮಾತ್ರ ಕೊಡಲಾಗಿದೆ.

ಶ್ರೀ ಅಜೀಜ್ ಸೇಟ್.—ಗೌರಿಬಿದನೂರು ತಾಲ್ಲೂಕಿನಲ್ಲಿರುವ ಜನ ನೀರು ಕುಡಿಯುವ ಸ್ಥಿತಿಯಲ್ಲಿಲ್ಲ ಎಂದು ಅಲ್ಲಿಗೆ ಬಾವಿಗಳನ್ನು ಕೊಡಲಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಹಾಗೇನಲ್ಲ, ಕೋಲಾರ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಬಾವಿಗಳನ್ನು ಕೊಟ್ಟಿಲ್ಲ ಎಂದು ಪ್ರಶ್ನೆ ಕೇಳಿರುವುದರಿಂದ ಅದರಂತೆ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ. ಗೌರಿಬಿದನೂರಿನಲ್ಲಿ ಕುಡಿಯುವ ನೀರಿನ ಬಾವಿಗಳೂ ಇವೆ.

Sri H. C. LINGAREDDY.—The list of drinking water wells shows that the Malur Taluk is having a large number of wells. But there is a complaint that Rs. 40,000 has not been paid. May I know whether the Government will make arrangements to make available the required funds ?

** Copies placed in the Mysore Legislature Library. *Vide* Number 11, dated 6-7-1967.